**CC 272/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 272/2024**

**ಸಿ ಡಬ್ಲ್ಯೂ -3**
**ಪಿ ಡಬ್ಲ್ಯೂ -2**

**ಸಾಕ್ಷಿಯ ಹೆಸರು - ಕುಶಾ**
**ತಂದೆಯ ಹೆಸರು - ಹಾಲಪ್ಪ**
**ವಯಸ್ಸು - 29 ವರ್ಷಗಳು**
**ಉದ್ಯೋಗ - ಸ್ಟುಡಿಯೋ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 1(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ 2 ವರ್ಷಗಳ ಹಿಂದೆ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಾಡಿದಾಗ ಚಾಸಾ - 1 ಮತ್ತು 2 ನನ್ನೊಂದಿಗೆ ಹಾಜರಿದ್ದರು. ಚಾಸಾ -1 ರವರಿಗೆ ಯಾರೋ ಕರೆ ಮಾಡಿದ್ದ ಬಗ್ಗೆ ಮತ್ತು ಆ ಕರೆ ಬಂದಾಗ ತಾವು ಯಾವ ಸ್ಥಳದಲ್ಲಿ ಇದ್ದರು ಎಂಬುದನ್ನು ತೋರಿಸಿದ ಬಗ್ಗೆ ಮಾಡಲಾಗಿದೆ. ಅವರಿಗೆ ಕರೆ ಮಾಡಿದ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ.

ಈಗ ನಾನು ನೋಡುತ್ತಿರುವ 4 ಫೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಫೋಟೋಗಳನ್ನು ಈಗಾಗಲೇ ಒಟ್ಟಾಗಿ ನಿಪಿಃ 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಚಾಸಾ -1 ರವರು ತಾವು ಪಂಚನಾಮೆ ಆದ ಸ್ಥಳದಲ್ಲಿ ದಿಃ 13-12-2022 ರಂದು ಮಧ್ಯಾಹ್ನ 2.30 ಗಂಟೆಗೆ ಇದ್ದಾಗ ಮೊಬೈಲ್ ಸಂಖ್ಯೆ 7795515286 ರಿಂದ ವಿಜಯ ಭಾಸ್ಕರ ಎಂದು ಪರಿಚಯಿಸಿಕೊಂಡು ಆ ವ್ಯಕ್ತಿ ತಾನು ಕರ್ನಾಟಕ ಮುಖ್ಯ ಮಂತ್ರಿಗಳ ಸ್ಪೇಷಲ್ ಆಫಿಸರ್ ಎಂದು ಗುರುತಿಸಿಕೊಂಡು ಚಾಸಾ -1 ರವರಿಗೆ ಎಕವಚನದಲ್ಲಿ ಮತ್ತು ಎರು ಧನಿಯಲ್ಲಿ ಮಾತನಾಡಿಸಿದ್ದರು ಎಂದು ತಿಳಿಸಿದ್ದರು ಅಂದರೆ ಸರಿಯಲ್ಲ. ಸದರಿಯವರು ಡಿಡಿಎಲ್ಆರ್ ಕಚೇರಿಯ ಹತ್ತಿರ ಎಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಚಾಸಾ -1 ರವರಿಗೆ ಮುಖ್ಯ ಮಂತ್ರಿಗಳ ಕಚೇರಿಯ ಹೆಸರಿನ ಸೋಗು ಹಾಕಿಕೊಂಡು ಹೆದರಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎನ್ ಬಿ ವಕೀಲರಿಂದಃ** ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.